ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560023

ಸಂಖ್ಯೆ:ಎನ್‌ಹೆಚ್‌ಎಂ/ಡಿಡಿ/ಐಎಂಎಂ/34/2021-22 ದಿನಾಂಕ:02.08.2021

ಇವರಿಗೆ,

1. ಮುಖ್ಯ ಆಯುಕ್ತರು, ಬಿಬಿಎಂಪಿ, ಬೆಂಗಳೂರು.
2. ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಕಛೇರಿ.

ಮಾನ್ಯರೆ,

ವಿಷಯ: ಗರ್ಭಿಣಿ ಮಹಿಳೆಯರಿಗೆ ಕೋವಿಡ್-19 ಲಸಿಕಾಕರಣ ಕುರಿತು ಮಾರ್ಗಸೂಚಿ

ಉಲ್ಲೇಖ:
1. ನಿರ್ದೇಶನಾಲಯದ ಸಮ ಸಂಖ್ಯೆ ಪತ್ರ ದಿನಾಂಕ 09.07.2021
2. ಭಾರತ ಸರ್ಕಾರದ ಪತ್ರ ಸಂಖ್ಯೆ: D.O.No.2022335/2021/ImmunizationDate:02.07.2021

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಗರ್ಭಿಣಿ ಮಹಿಳೆಯರಿಗೆ ಕೋವಿಡ್-19 ಲಸಿಕಾಕರಣ ಕುರಿತು ತಿಳಿಸಲಾಗಿತ್ತು. ಇದನ್ನು ಕಾರ್ಯಗತಗೊಳಿಸುವ ಸಲುವಾಗಿ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.

ಭಾರತದಲ್ಲಿ ಪ್ರಸ್ತುತ 3 ಲಸಿಕೆಗಳು (ಕೋವಿಶೀಲ್ಡ್, ಕೋವ್ಯಾಕ್ಸಿನ್ ಮತ್ತು ಸ್ಪುಟ್ನಿಕ್ ವಿ) ಅನುಮೋದನೆಗೊಂಡಿರುತ್ತದೆ. ಆದ್ದರಿಂದ ಯಾವುದೇ ಗರ್ಭಿಣಿ ಮಹಿಳೆ ಕೋವಿಡ್ ಲಸಿಕೆ ಪಡೆಯಲು ಆಯ್ಕೆ ಮಾಡಿದಲ್ಲಿ ಗರ್ಭಾವಸ್ಥೆಯ ಯಾವುದೇ ಸಮಯದಲ್ಲಿ ಲಸಿಕೆಗಳನ್ನು ಪಡೆಯಬಹುದಾಗಿರುತ್ತದೆ.

**ಗರ್ಭಿಣಿಯರನ್ನು ತಲುಪಲು ಹಾಗೂ ತಲುಪಲು ಬಳಸಿಕೊಳ್ಳಬಹುದಾಗಿರುವ ವೇದಿಕೆ**

1. **ಆಪ್ತಸಮಾಲೋಚನೆ ನಡೆಸಲು ಸಂಭಾವ್ಯ ವೇದಿಕೆಗಳು**
   - ಆಶಾ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಕಿರಿಯ ಮಹಿಳಾ ಆರೋಗ್ಯ ಕಾರ್ಯಕರ್ತೆಯರು ಕುಟುಂಬ ಭೇಟಿ ವೇಳೆ ಗರ್ಭಿಣಿ ಮಹಿಳೆಯರಿಗೆ ಕೋವಿಡ್ ಲಸಿಕಾಕರಣದ ಮಹತ್ವವನ್ನು ತಿಳಿಸುವುದು ಮತ್ತು ಅದರ ಲಾಭಗಳನ್ನು ವಿವರಿಸಿ ಲಸಿಕೆ ಪಡೆಯಲು ಮಾಹಿತಿ ಶೀಟ್ ಬಳಸಿ ಆಪ್ತ ಸಮಾಲೋಚನೆ ನಡೆಸುವುದು.
   - ಮಹಿಳಾ ಆರೋಗ್ಯ ಕಾರ್ಯಕರ್ತೆಯರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಸಹಕಾರದೊಂದಿಗೆ ಗ್ರಾಮ ಆರೋಗ್ಯ ನೈರ್ಮಲ್ಯ ಸಭೆಗಳಲ್ಲಿ, ಗ್ರಾಮ ಆರೋಗ್ಯ ಪೌಷ್ಠಿಕ ಸಭೆಗಳಲ್ಲಿ, ತಾಯಂದಿರ ಸಭೆಗಳಲ್ಲಿ ಕೂಡ ಆಪ್ತ ಸಮಾಲೋಚನೆ ನಡೆಸುವುದು.
   - ಗರ್ಭಿಣಿ ಮಹಿಳೆಯರು ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗಳಿಗೆ ಭೇಟಿ ನೀಡಿದಾಗ / PMSMA ದಿನಗಳಂದು ವೈದ್ಯಾಧಿಕಾರಿಗಳು ಮತ್ತು ಶುಶ್ರೂಷಕಿಯರು ಆಪ್ತ ಸಮಾಲೋಚನೆ ನಡೆಸಿ ಅವರ ಅನುಮಾನಗಳನ್ನು ಪರಿಹರಿಸುವುದು.
   - ಗರ್ಭಿಣಿಯರ ಆರೋಗ್ಯ ತಪಾಸಣೆ ವೇಳೆಯಲ್ಲಿ ಶುಶ್ರೂಷಕಿಯರು ಮತ್ತು ವೈದ್ಯಾಧಿಕಾರಿಗಳು ಆಪ್ತ ಸಮಾಲೋಚನೆ ನಡೆಸುವುದು.
   - ವಿವಿಧ ಹಂತದಲ್ಲಿ ನಡೆಯುವ ಆಪ್ತ ಸಮಾಲೋಚನೆಯ ವರದಿಯನ್ನು ತಾಯಿ ಕಾರ್ಡ್‌ನಲ್ಲಿ ಕಡ್ಡಾಯವಾಗಿ ನಮೂದಿಸುವುದು.
2. ಲಸಿಕೆ ಪಡೆಯಲು ಮುಂದಾಗುವ ಗರ್ಭಿಣಿ ಮಹಿಳೆಯರನ್ನು ಹತ್ತಿರದ ಕೋವಿಡ್ ಲಸಿಕಾಕರಣ ಕೇಂದ್ರಕ್ಕೆ ಸಜ್ಜುಗೊಳಿಸಿ ಅವರಿಗೆ ಸರದಿಯಲ್ಲಿ ಕಾಯಿಸದೆ ಅವರಿಗೆ ಬಂದ ಕೂಡಲೆ ಕೋವಿಡ್ ಲಸಿಕಾಕರಣ ನಡೆಸುವಲ್ಲಿ ನೆರವಾಗುವುದು.

3. ಲಸಿಕಾಕರಣ ನಡೆಸುವ ಮುನ್ನ ಆಪ್ತ ಸಮಾಲೋಚನೆ ನಡೆಸಿರುವುದನ್ನು ತಾಯಿ ಕಾರ್ಡ್‌ನಲ್ಲಿ ನಮೂದಿಸಿದಂತೆ ವ್ಯಾಕ್ಸಿನೇಟರ್‌ಗಳು ಖಚಿತಪಡಿಸಿಕೊಂಡು ನಂತರವಷ್ಟೇ ಲಸಿಕಾಕರಣ ನಡೆಸುವುದು
4. ಕೋವಿನ್ ಪೋರ್ಟಲ್ ನಲ್ಲಿ ಗರ್ಭಿಣಿ ಮಹಿಳೆಯರ ಕೋವಿಡ್ ಲಸಿಕಾಕರಣಕ್ಕೆ ಆನ್‌ಸೈಟ್ ಲಸಿಕಾಕರಣ ನಡೆಸಲು ವ್ಯವಸ್ಥೆ ಲಭ್ಯವಿದ್ದು ಅವರಿಗೆ ಲಸಿಕಾಕರಣದ ನಂತರ ಪ್ರಮಾಣ ಪತ್ರ ನೀಡುವುದು.
5. ಮಾರ್ಗಸೂಚಿಯನ್ವಯ ಲಸಿಕೆ ಪಡೆದ ಎಲ್ಲಾ ಗರ್ಭಿಣಿ ಮಹಿಳೆಯರ ಅನುಸರಣೆ ನಡೆಸಿ ಯಾವುದೇ ಅಡ್ಡ ಪರಿಣಾಮಗಳುಂಟಾದಲ್ಲಿ ಎಇಎಫ್‌ಐ ಮಾರ್ಗಸೂಚಿಯನ್ವಯ ನಿರ್ವಹಿಸುವುದು ಮತ್ತು ವರದಿ ನೀಡುವುದು.

ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಭೆಗಳಲ್ಲಿ ಕಾರ್ಯ ಯೋಜನೆ, ತರಬೇತಿ ಹಾಗೂ ಸದರಿ ಕಾರ್ಯಾಚರಣೆಯನ್ನು ಮೇಲುಸ್ತುವಾರಿ ನಡೆಸಲು ಕೋರಲಾಗಿದೆ.

(signature)

**ಅಭಿಯಾನ ನಿರ್ದೇಶಕರು**
**ರಾಷ್ಟ್ರೀಯ ಆರೋಗ್ಯ ಅಭಿಯಾನ**

**ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತ ಕುಟುಂಬ ಕಲ್ಯಾಣ ಅಧಿಕಾರಿಗಳು.
2. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ), ಬಿಬಿಎಂಪಿ.
3. ಎಲ್ಲಾ ಜಿಲ್ಲೆಯ ಆರ್.ಸಿ.ಹೆಚ್ ಅಧಿಕಾರಿಗಳು,
4. ಲಸಿಕಾಧಿಕಾರಿಗಳು (ಬಿ.ಬಿ.ಎಂ.ಪಿ)

**ಮಾಹಿತಿಗಾಗಿ:**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
4. ವಿಶೇಷ ಆಯುಕ್ತರು (ಆರೋಗ್ಯ), ಬಿಬಿಎಂಪಿ.
5. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ.
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
7. ಅಪರ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
8. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
9. ಉಪ ನಿರ್ದೇಶಕರು (ಲಸಿಕೆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
10. ಉಪ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
11. ಕಛೇರಿ ಪ್ರತಿ